Sri DIGAMBAR RAO BALWANT RAO.—May I know whether a summary of the report will be made available to members before the discussion takes place?

Mr. SPEAKER.—We have got the full report in the Library.

Sri K. V. SHANKARA GOWDA.—I am thinking of getting printed a summary of the recommendations. I think I will be able to do so. In that case I will place a copy of that summary in the hands of hon'ble members.

Sri A. R. BADARI NARAYAN.—In view of the urgency and importance of the matter, will Government consider coming to an early conclusion on this matter?

Sri K. V. SHANKARA GOWDA.—I do appreciate the anxiety of the hon'ble member, but hasty conclusions will not do in this case because the recommendations are of a very far reaching character and so we will have to very carefully examine the various recommendations and come to certain decisions. I will certainly bear the suggestion of the hon'ble member in mind.

ಶ್ರೀ ಎಂ. ಎಸ್. ಕೃಷ್ಣನ್.—ವಿದ್ಯಾಭ್ಯಾಸದ ಪದ್ಧತಿ ಮತ್ತು ಕ್ರಮ ಮೈಸೂರು ದೇಶದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿರುವುದರಿಂದ ಎಲ್ಲ ಕಡೆಯೂ ಏಕರೂಪವಾಗಿರುವಂತೆ ಮಾಡಲು ತಕ್ಷಣ ಕ್ರಮ ಕೈಕೊಳ್ಳುತ್ತೀರಾ?

ಶ್ರೀ ಕೆ. ವಿ. ಶಂಕರ ಗೌಡ.—ಕೊಠಾರಿ ಕಮಿಷನ್ ವರದಿಯಲ್ಲಿ ಏಕರೂಪತೆಯಿಂದ ಬೇಕಾದ ಆವಶ್ಯಕತೆಯಿಲ್ಲವೆಂದು ನಮೂದಿಸಿದ್ದಾರೆ. ವಿವಿಧತೆಯಿದ್ದರೆ ಒಳ್ಳೆಯದೆಂಬುದು ಆ ಕಮಿಷನ್ ಅಭಿಪ್ರಾಯವಾಗಿದೆ. ಆದುದರಿಂದ ಎಲ್ಲ ವಿಷಯಗಳಲ್ಲೂ ಏಕರೂಪತೆ ತರುವುದಕ್ಕೆ ಸಾಧ್ಯವಿಲ್ಲ, ಕೆಲವು ವಿಷಯಗಳಲ್ಲಿ ತರಬೇಕಾಗುತ್ತದೆ.

ಶ್ರೀ ಎ. ನಾಜಪ್ಪ.—20 ವರ್ಷಗಳಿಂದ ದೊಡ್ಡ ದೊಡ್ಡ ಸುಧಾರಣೆಗಳನ್ನು ಮಾಡಿದ್ದಾರೆ. ಆದರೆ ಇದುವರೆಗೆ ಯಾವ ಸುಧಾರಣೆಯಿಂದಲೂ ಹಿಂದಿನಷ್ಟು ಉಪಯೋಗವಾಗಿಲ್ಲವೆಂಬುದು ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ವಿ. ಶಂಕರ ಗೌಡ.—ಹಾಗಾಗಿಲ್ಲ, ಒಂದೇ ಒಂದು ಸರ ಬದಲಾವಣೆ 20 ವರ್ಷದಿಂದ ದೊಡ್ಡದಾಗಿ ಆಗಿರುವುದು. ಅದೇನೆಂದರೆ ಮೊದಲಿದ್ದ ಇಂಟರ್‌ಮೀಡಿಯೇಟ್ ಪರೀಕ್ಷೆಗೆ ಕುಳಿತುಕೊಳ್ಳುವ ವಯಸ್ಸಿನ ಮಿತಿಯನ್ನು ಒಂದು ವರ್ಷದ ಪಿ.ಯು.ಸಿ. ಆಫಲಾ 11ನೆಯ ಸ್ಟ್ಯಾಂಡರ್ಡ್ ಇರುವಂತೆ ಮಾಡಿದ್ದಾರೆ, ಸಣ್ಣ ಸಣ್ಣ ಬದಲಾವಣೆಯಾಗಿರಬಹುದು. ಆದುದರಿಂದ ಅನೇಕ ಬದಲಾವಣೆ ದೊಡ್ಡದಾಗಿ ಏನೂ ಆಗಿಲ್ಲ.

Primary Schools in Ankola Taluk

*Q.—264. Sri D. S. NADKARNI (Ankola).—

Will the Minister for Education be pleased to state :—

(*a*) the number of primary schools for boys and girls in Ankola Taluk ;

(*b*) whether all these schools have got their own buildings ;

(*c*) if not, how many of them have not got their own buildings ;

(*d*) whether they are aware that the Government share of financial assistance given for construction of buildings at the rate of Rs. 1,000 is quite inadequate ;

(*e*) whether they would construct a primary school building for girl students at their own cost in Ankola Taluk ?

A.— Sri K. V. SHANKARA GOWDA (Minister for Education).—

(*a*) 139.
(*b*) No.
(*c*) 52 schools.
(*d*) This is only an incentive grant.
(*e*) No. Construction of Primary School Buildings is the responsibility of Taluka Boards under the Village Panchayats and Taluk Boards Act.

ಶ್ರೀ ಡಿ. ಎಸ್. ನಾಡಕರ್ಣಿ.—ಉತ್ತರ ಕನ್ನಡ ಜಿಲ್ಲೆಯಲ್ಲಿ 37 ಶಾಲೆಗಳಿಗೆ ಕಟ್ಟಡವಿಲ್ಲ. ಕೆಲವು ಕಡೆ ಸರಕಾರ ಕಟ್ಟಡ ಕಟ್ಟಿಸಿಕೊಟ್ಟಿರುವಂತೆ ಅಂಕೋಲೆದಲ್ಲೂ ವಿಮೆನ್ಸ್ ವೆಲ್‌ಫೇರ್ ಫಂಡಿನಿಂದಲಾದರೂ ಕಟ್ಟಿಸಿ ಕೊಡುವುದೇ?

ಶ್ರೀ ಕೆ. ವಿ. ಶಂಕರ ಗೌಡ.—ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಸರಕಾರ ಹಣ ಕೊಡುವುದಿಲ್ಲ, ಕಟ್ಟಡ ಒದಗಿಸುವುದು ತಾಲ್ಲೂಕು ಮಂಡಲಿಯ ಜವಾಬ್ದಾರಿ.

ಶ್ರೀ ಡಿ. ಎಸ್. ನಾಡಕರ್ಣಿ.—ಪ್ರಾಥಮಿಕ ಶಾಲೆಗೆ ಒಂದು ಕಡೆ ಶೇಕಡ 75 ಭಾಗ ಕಟ್ಟಡ ಕ್ಕಾಗಿ ಕೊಡಲಾಗಿದೆ, ಅಂಕೋಲೆದಲ್ಲಿ ಹೈಸ್ಕೂಲಿಗೆ ಪೂರ್ತಿ ಖರ್ಚು ಕೊಡಲಾಗಿದೆ. ನಾನು ಕೇಳು ವುದು ಹೆಣ್ಣು ಹುಡುಗರ ಶಾಲೆಯಾದ್ದರಿಂದ ಅವರ ಶಿಕ್ಷಣಕ್ಕೆ ತೊಂದರೆಯಾಗಿರುವುದರಿಂದ ವಿಮೆನ್ ವೆಲ್‌ಫೇರ್ ಫಂಡಿನಿಂದಲಾದರೂ ಹಣ ಕೊಡಲು ಸಾಧ್ಯವೆ?

ಶ್ರೀ ಕೆ. ವಿ. ಶಂಕರಗೌಡ.—ಬಹಳ ಹಿಂದೆ ಕೊಟ್ಟಿರಬಹುದು. ಈಗಿನ ಪದ್ಧತಿಯಂತೆ ಅದು ಸರಕಾರದ ಜವಾಬ್ದಾರಿಯಲ್ಲ, ಒಂದು ಸಾವಿರ ರೂಪಾಯಿ ಮಾತ್ರ ಸರಕಾರ ಕೊಡುವುದು. ಶೇಕಡ 40 ಭಾಗ ಗ್ರಾಮಸ್ಥರು ಕೊಡಬೇಕು, ಉಳಿದಿರುವುದನ್ನು ತಾಲ್ಲೂಕುಬೋರ್ಡ್ ಮತ್ತು ಸರಕಾರ ವಹಿಸಬೇಕು. ಗ್ರಾಮಸ್ಥರು ಮುಂದೆ ಬಂದರೆ ತಾಲ್ಲೂಕು ಬೋರ್ಡು ಮತ್ತು ಸರಕಾರ ಯಾವ ಸಹಾಯ ಕೂಡಬಹುದೋ ಅದನ್ನು ಕೊಡಲು ಏರ್ಪಾಡು ಮಾಡಲಾಗುವುದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 120 ರಿಂದ 150 ಮೈಲಿ ದೂರಗಳಿರುವ ಮಲೆನಾಡು ಭಾಗಗಳಲ್ಲಿ ಇರುವ ಪ್ರಾಥಮಿಕ ಶಾಲೆಗಳಿಗೆ ಸುಮಾರು 52 ಶಾಲೆಗಳಿಗೆ ಕಟ್ಟಡವಿಲ್ಲ ಇಂತಹ ಶಾಲೆಗಳಿಗೆ ಸಹಾಯ ಕೊಡುವಾಗ ಈಗ ಕೊಡುತ್ತಿ ರುವ ಒಂದು ಸಾವಿರ ರೂಪಾಯಿಗಳಷ್ಟು ಸಹಾಯ ಧನವನ್ನು ಇನ್ನೂ ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲವೆ?

ಶ್ರೀ ಕೆ. ವಿ. ಶಂಕರ ಗೌಡ.—ಇದು ಸಾಧ್ಯವಿಲ್ಲ.

ಶ್ರೀ ಚಿಕ್ಕೇಗೌಡ.—ಶಾಲಾ ಕಟ್ಟಡಗಳಿಗೆ ಅಂದಾಜು ಮಾಡಿರುವ ಪ್ರಕಾರ ಒಂದು ರೂಮಿಗೆ ಎಷ್ಟು ಖರ್ಚು ಬರುತ್ತದೆ?

ಶ್ರೀ ಕೆ. ವಿ. ಶಂಕರ ಗೌಡ.—ಒಂದು ರೂಮಿಗೆ ಸುಮಾರು ಮೂರು ಅಥವಾ ನಾಲ್ಕು ಸಾವಿರದವರೆಗೆ ಬರಬಹುದು.

ಶ್ರೀ ಎಸ್. ಗೋಪಾಲಗೌಡ.—ರಾಜ್ಯಾಂಗದ ನಿರ್ದೇಶನದ ತತ್ವಗಳ ಪ್ರಕಾರ ಪ್ರಾಥಮಿಕ ಶಾಲೆಗಳ ಹೊಣೆ ಮತ್ತು ಜವಾಬ್ದಾರಿ ಸರಕಾರದ ಮೇಲಿದೆ. ಆದರೆ ತಾವೀಗ ಹೇಳುತ್ತಿರಿ ಪ್ರೈವೇಟ್ ಶಾಲೆಗಳ ಕಟ್ಟಡ ಕಟ್ಟಿಸುವುದು ಸರಕಾರದ ಹೊಣೆಯಲ್ಲ ಎಂದು, ಇದರಲ್ಲಿ ಯಾವುದು ಸರಿ? ಕಟ್ಟಡ ಬಿಟ್ಟು ಪ್ರೈವೇಟ್ ವಿದ್ಯಾಭ್ಯಾಸವೇ?

ಶ್ರೀ ಕೆ. ವಿ. ಶಂಕರ ಗೌಡ.—ಮಾನ್ಯ ಸದಸ್ಯರು ನನ್ನ ಅಭಿಪ್ರಾಯವನ್ನು ತಪ್ಪಾಗಿ ತಿಳಿದು ಕೊಂಡಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಹೆಚ್ಚೆ ಮಾಡತಕ್ಕದ್ದು ಸರಕಾರದ ಆದ್ಯ ಕರ್ತವ್ಯ; ಇದು ರಾಜ್ಯಾಂಗದಲ್ಲೂ ಉಲ್ಲೇಖಿತವಾಗಿದೆ. ಇದನ್ನು ಸರಕಾರ ಮಾಡುತ್ತಿದೆ. ಕಟ್ಟಡಗಳನ್ನು ಕಟ್ಟ ತಕ್ಕದ್ದು ತಾಲ್ಲೂಕು ಬೋರ್ಡಗಳು ವಹಿಸಬೇಕು ಮತ್ತು ಅವರು ಕಟ್ಟಿಸಬೇಕು. ಅಲ್ಲದೆ ತಾಲ್ಲೂಕಾ ಬೋರ್ಡಗಳಿಗೆ ದುಡ್ಡನ್ನು ಸರಕಾರದವರೇ ಕೊಡುತ್ತಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರು ಮರೆಯಬಾರದು.

ಶ್ರೀ ಡಿ.ಎಸ್. ನಾಡಕರ್ಣಿ.—ಒಂದು ಸಾವಿರ ರೂಪಾಯಿಗಳಲ್ಲಿ ಇಮಾರತ್ತನ್ನು ಕಟ್ಟಲಿಕ್ಕಾಗುತ್ತದೆಯೇ?

(ಉತ್ತರವಿಲ್ಲ)

ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ್.—ತಾಲ್ಲೂಕು ಬೋರ್ಡುಗಳಲ್ಲಿ ಹಾಗೂ ಪಂಚಾಯಿತಿಗಳಲ್ಲಿ ಪ್ರೈಮರಿ ವಿದ್ಯಾಭ್ಯಾಸ ಜನಗಳಿಗೆ ಕೊಡಲು ಸಾಕಷ್ಟು ಚೈತನ್ಯವಿಲ್ಲದೇ ಇರುವುದರಿಂದ ಅಂತಹ ಕಡೆಗಳಲ್ಲಿ ಹೇಗೆ ಮಾಡಬೇಕು ಎಂದು ಸರಕಾರದ ಅಭಿಪ್ರಾಯವಿದೆ?

ಶ್ರೀ ಕೆ. ವಿ. ಶಂಕರ ಗೌಡ.—ಎಜುಕೇಷನ್ನೇನೋ ಉಚಿತವಾಗಿ ಕೊಡಬೇಕು ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಚೈತನ್ಯ ಕ್ರೋಢೀಕರಿಸುವ ವ್ಯವಸ್ಥೆಗಳು ಇದರ ಕಡೆಗೆ ಸ್ವಲ್ಪ ಹೆಚ್ಚು ಪ್ರಯತ್ನ ಮಾಡಬೇಕು.

Sri DIGAMBAR RAO BALWANT RAO.—In case no funds are forthcoming from Taluk Boards for construction of buildings for primary education, is it not the duty of the Government to build the buildings for primary education?

ಶ್ರೀ ಕೆ. ವಿ. ಶಂಕರ ಗೌಡ.—ಇಲ್ಲ.

ಶ್ರೀ ಪಿ. ತಮ್ಮಯ್ಯ.—ಸರಕಾರದವರು ಪ್ರಾಥಮಿಕ ಶಾಲಾ ಕಟ್ಟಡಗಳಿಗಾಗಿ ಒಂದು ಸಾವಿರ ರೂಪಾಯಿಗಳಷ್ಟು ಕೊಡಬೇಕು ಎಂದು ಅದಕ್ಕೆ ತಕ್ಕಂತೆ ತಾಲ್ಲೂಕು ಬೋರ್ಡುಗಳಲ್ಲಿ ಅಥವಾ ಪಂಚಾಯಿತಿಗಳಲ್ಲಿ ಪ್ಲಾನುಗಳನ್ನು ಮಾಡಿದ್ದಾರೆ. ಈಗ ಇದನ್ನು ಸ್ವಲ್ಪ ಬದಲಾವಣೆ ಮಾಡಿ ಈಗ ನೀವು ಕೊಡುವ ಹಣಕ್ಕೆ ಅನುಕೂಲವಾಗುವಂತೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ. ವಿ. ಶಂಕರ ಗೌಡ.—ಪ್ಲಾನನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಾಲ್ಲೂಕು ಬೋರ್ಡುಗಳಿಗೆ ಹಾಗೂ ಪಂಚಾಯತಿಗಳಿಗೆ ದುಡ್ಡನ್ನು ಕೊಡುವ ಹೊಣೆ ಸರಕಾರದ ಮೇಲೇ ಇದೆ. ಸಂಸ್ಥಾನಾವಳಿ ಇರುವ ಪ್ರೈಮರಿ ಶಾಲೆಗಳಲ್ಲಿ ಈಗ ಕೊಡುತ್ತಿರುವ ಹಣವೇ ಕಡಿಮೆ ಇರುವುದರಿಂದ ಇನ್ನೂ ಸ್ವಲ್ಪ ಹೆಚ್ಚಾಗಿ ಸರಕಾರ ಹಣವನ್ನೇತಕ್ಕೆ ಕೊಡಬಾರದು?

1-30 P.M.

ಶ್ರೀ ಕೆ. ವಿ. ಶಂಕರ ಗೌಡ.—ಹಣ ಕೊಡಲು ಸರಕಾರದ ಬೊಕ್ಕಸದಲ್ಲಿ ದುಡ್ಡಿಲ್ಲ ಎನ್ನುವುದೂ ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ಹೆಚ್. ಬಿ. ಹ್ಯಾಲನಯ್ಯ.—ಗ್ರಾಮಾಂತರಗಳಲ್ಲಿರುವ ಅನೇಕ ಪ್ರಾಥಮಿಕ ಶಾಲೆಗಳನ್ನು ಮತ್ತು ಅವುಗಳ ಕಟ್ಟಡಗಳನ್ನು ನೋಡಿದರೆ ಅಲ್ಲಿ ದನಗಳೂ ಕೂಡ ಇರಲು ರಾಯಕ್ಕಾಗಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

Sri K. V. SHANKARA GOWDA.—It is a wild imagination.

ಶ್ರೀ ಎಸ್. ಎಂ. ಗುರ್ರೆಡ್ಡಿ.—ತಾಲ್ಲೂಕು ಬೋರ್ಡುಗಳಲ್ಲಿ ಸಾಕಷ್ಟು ಹಣದ ಕೊರತೆ ಇರುವುದರಿಂದ ಇಂತಹ ತಾಲ್ಲೂಕು ಬೋರ್ಡುಗಳಿಗೆ ಸರಕಾರದವರು ಲೋನಿನ ರೂಪದಲ್ಲಿ ಸಹಾಯವನ್ನು ಕೊಡಲು ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಕೆ. ವಿ. ಶಂಕರ ಗೌಡ.—ಸಾಲ ಕೊಡುವುದು ಸರಕಾರದ ಬೊಕ್ಕಸದ ಮೇಲೆ ಅವಲಂಬಿಸಿದೆ. ಆದರೆ ಸರಕಾರದ ಬೊಕ್ಕಸದಲ್ಲಿ ಈಗ ದುಡ್ಡಿಲ್ಲ, ಅದರಿಂದಾಗಿ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಅಜೀಜ್ ಸೇಟ್.—ಸರಕಾರ ಈಗ ಪ್ರಾಥಮಿಕ ಶಾಲೆಗಳಿಗೆ ಸಹಾಯವನ್ನು ಮಾಡುತ್ತಿರುವಾಗ ಸ್ವಲ್ಪ ಕಷ್ಟವಾಗುತ್ತಿರುವುದರಿಂದ ಈಗಿರುವ ನಿಯಮಗಳನ್ನು ಬದಲಾವಣೆ ಮಾಡಿ ಇಂತಹ ಶಾಲೆಗಳಿಗೆ ಅನುಕೂಲವಾಗುವಂತೆ ಮಾಡುತ್ತೀರಾ?

ಶ್ರೀ ಕೆ. ವಿ. ಶಂಕರ ಗೌಡ.—ಎಲ್ಲ ಪ್ರಾಥಮಿಕ ಶಾಲೆಗಳೂ ಚೆನ್ನಾಗಿ ನಡೆಯಬೇಕೆಂಬುದೇ ಸರಕಾರದ ಆಸಕ್ತಿಯಾಗಿದೆ. ಆದರೆ ಸರಕಾರದಲ್ಲಿ ಸಾಕಾದಷ್ಟು ದುಡ್ಡಿಲ್ಲ, ಪರಿಸ್ಥಿತಿ ಸುಧಾರಿಸಿ ಹೆಚ್ಚು ದುಡ್ಡು ನಮಗೆ ಒದಗಿದಾಗ ಹೆಚ್ಚು ಸಹಾಯವನ್ನು ಕೊಡಲು ಪ್ರಯತ್ನ ಮಾಡಬಹುದು.